ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/171/2024-2025
ದಿನಾಂಕ 04-12-2025

ಅಡಕ: ನಡವಳ ಪ್ರತಿಗಳು 1-8
"ಪ್ರಮಾಣಿತ ಅಂಚೆ ಮೂಲಕ"

ಶಿಕ್ಷಣ ಮಂಡಳ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 15-10-2025ರಂದು ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

*****

ದಿನಾಂಕ: 15-10-2025 ರಂದು ಬೆಳಗ್ಗೆ 11-30 ಗಂಟೆಗೆ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ಜರುಗಿದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ. ನಡಾವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡಾವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ.

ನಿಮ್ಮ ನಂಬುಗೆಯ

Lingaraju 04/12/25
ಉಪಕುಲಸಚಿವರು (ಪ್ರಾಧಿಕಾರ)

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಸಂಯೋಜಕರು, ಮಾಹಿತಿ ಮತ್ತು ಸಂವಹನ ವಿಭಾಗ (ICD), ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಶಿಕ್ಷಣ ಮಂಡಳ ಸಭೆಯ ನಡಾವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
7. ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ 15-10-2025ರಂದು ಪೂರ್ವಾಹ್ನ 11-30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡಾವಳಿ.

ಉಪಸ್ಥಿತರು:

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಕೆ.ವಿವೇಕಾನಂದ, ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 3. | ಡಾ. ಗಣೇಶ ಕೆ | ಸದಸ್ಯರು |
| 4. | ಡಾ. ಅಂತೋಣಿ ಪೌಲ್ ರಾಜ್.ಸಿ | ಸದಸ್ಯರು |
| 5. | ಡಾ. ಪ್ರಿಯ ಸಿ ಜೆ | ಸದಸ್ಯರು |
| 6. | ಶ್ರೀಮತಿ ಕೆ.ಎಂ ಪದ್ಮವತಿ | ಸದಸ್ಯರು |
| 7. | ಪ್ರೊ. ಜೆ.ಸೋಮಶೇಖರ್ | ಸದಸ್ಯರು |
| 8. | ಪ್ರೊ. ಹೆಚ್.ಡಿ ರೇವಣ್ಣಸಿದ್ದಪ್ಪ | ಸದಸ್ಯರು |
| 9. | ಪ್ರೊ. ಕೆ. ಕೆಂಪರಾಜು | ಸದಸ್ಯರು |
| 10. | ಪ್ರೊ. ಎಸ್.ರವಿ | ಸದಸ್ಯರು |
| 11. | ಡಾ. ರಾಕೇಶ್.ಸಿ | ಸದಸ್ಯರು |
| 12. | ಶ್ರೀ ನಾನ್ಕೊ ನಾಯಕ್ | ಸದಸ್ಯರು |
| 13. | ಡಾ. ಹೆಚ್.ಎಂ.ಲೀಲಾವತಿ | ಸದಸ್ಯರು |
| 14. | ಪ್ರೊ. ಎಸ್.ಜೆ.ಮಂಜುನಾಥ್, ಡೀನರು, ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ | ಸದಸ್ಯರು |
| 15. | ಪ್ರೊ. ಎಂ. ಸುರೇಶ್ ಬೆಂಜಮೀನ್, ಡೀನರು, ಕಾನೂನು ನಿಕಾಯ | ಸದಸ್ಯರು |
| 16. | ಪ್ರೊ. ಸಿ. ವೆಂಕಟೇಶ್, ಡೀನರು, ಶಿಕ್ಷಣ ನಿಕಾಯ ಹಾಗೂ ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ವಿಭಾಗ | ಸದಸ್ಯರು |
| 17. | ಪ್ರೊ. ಜಿ.ಆರ್.ಜನಾರ್ಧನ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 18. | ಪ್ರೊ. ಎಂ.ಎಸ್ ಶೇಖರ್, ಡೀನರು, ಕಲಾ ನಿಕಾಯ | ಸದಸ್ಯರು |
| 19. | ಪ್ರೊ. ಕೆ. ನಾಗೇಂದ್ರ ಬಾಬು, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 20. | ಕು. ಪುಷ್ಪಲತಾ ಹೆಚ್.ಎನ್ | ಸದಸ್ಯರು |
| 21. | ಶ್ರೀ ದರ್ಶನ್ ಡಿ, ಸಂಶೋಧನಾ ವಿದ್ಯಾರ್ಥಿ | ಸದಸ್ಯರು |
| 22. | ಡಾ. ಸರಸ್ವತಿ.ಪಿ, ಗ್ರಂಥಪಾಲಕರು (ಪ್ರಭಾರ), ವಿಶ್ವವಿದ್ಯಾನಿಲಯ ಗ್ರಂಥಾಲಯ | ಸದಸ್ಯರು |
| 23. | ಪ್ರೊ. ಕೆ. ಮಂಟೇಲಿಂಗು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ | ಸದಸ್ಯರು |
| 24. | ಪ್ರೊ. ಎನ್.ನಾಗರಾಜ, ಕುಲಸಚಿವರು (ಪರೀಕ್ಷಾಂಗ) ಹಾಗೂ ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳ | ಸದಸ್ಯರು |
| 25. | ಶ್ರೀಮತಿ ರೇಖಾ.ಕೆ.ಎಸ್, ಕೆ.ಎಸ್.ಎ.ಎಸ್ ಹಣಕಾಸು ಅಧಿಕಾರಿಗಳು | ಸದಸ್ಯರು |

ಅನುಪಸ್ಥಿತರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು<br>ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಕೆ, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ದರ್ಶನ್ ಧ್ರುವನಾರಾಯಣ, ವಿಧಾನ ಸಭಾ ಸದಸ್ಯರು | ಸದಸ್ಯರು |

| | | |
|---|---|---|
| 4. | ಶ್ರೀ ಎಂ.ಪಿ.ಕುಶಾಲಪ್ಪ, ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 5. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | ಸದಸ್ಯರು |
| 6. | ಡಾ. ಮುಜೀದ ಬಾನು | ಸದಸ್ಯರು |
| 7. | ಪ್ರೊ. ಕೆ. ಸದಾಶಿವ | ಸದಸ್ಯರು |
| 8. | ಶ್ರೀ ಸಿ.ಚಂದ್ರಶೇಖರ್ | ಸದಸ್ಯರು |
| 9. | ಪ್ರೊ. ರಾಜಪ್ಪ ದಳವಾಯಿ | ಸದಸ್ಯರು |
| 10. | ಪ್ರೊ. ಸಿ.ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು | ಸದಸ್ಯರು |
| 11. | ಶ್ರೀಮತಿ ಎಂ.ಕೆ.ಸವಿತಾ. ಕೆ.ಎ.ಎಸ್. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಮೊದಲಿಗೆ ಕುಲಸಚಿವರ ಅನುಪಸ್ಥಿತಿಯಲ್ಲಿ ಕುಲಸಚಿವರು (ಪರೀಕ್ಷಾಂಗ) ಅವರು ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿರುವ ಗೌರವಾನ್ವಿತ ಅಧ್ಯಕ್ಷರು, ಎಲ್ಲಾ ಸದಸ್ಯರುಗಳನ್ನೂ ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನೂ ಸಭೆಗೆ ಸ್ವಾಗತಿಸಿದರು.

ನಂತರ ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ಹಾಗೂ ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸ್ವಾಗತಿಸಿ ಪರಿಚಯಿಸಲಾಯಿತು.

1. ಪ್ರೊ. ಎಸ್.ರವಿ, ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಡಾ. ರಾಕೇಶ್.ಸಿ, ಮೈಸೂರು.
3. ಶ್ರೀ ಸಿ.ಚಂದ್ರಶೇಖರ್, ಮೈಸೂರು.
4. ಶ್ರೀ ನಾಂಕೋ ನಾಯಕ್, ಮೈಸೂರು
5. ಡಾ. ಹೆಚ್.ಎಂ.ಲೀಲಾವತಿ, ಮೈಸೂರು
6. ಪ್ರೊ. ರಾಜಪ್ಪ ದಳವಾಯಿ, ಮೈಸೂರು

ತದನಂತರ ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸುವುದು.

1. ಕು. ತನುಜ ಎನ್
2. ಕು. ರೊಕಿಯ ಬೇಗಂ
3. ಕು. ಆದಿತಿ ಎನ್
4. ಕು. ವಸಂತಕುಮಾರಿ ಎಸ್

ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ, ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು (ಪರೀಕ್ಷಾಂಗ) ಅವರು ಸಭೆಯಲ್ಲಿ ಮಂಡಿಸಿದರು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| ದಿನಾಂಕ: 30-06-2025 ರಂದು ಜರುಗಿದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
| ತೀರ್ಮಾನ | **ದಿನಾಂಕ: 30-06-2025 ರಂದು ಜರುಗಿದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ದೃಢೀಕರಿಸಿತು.** |
| ಸಾಮಾನ್ಯ ಸಭೆ 2025/2.1 | ವಾಣಿಜ್ಯ ನಿಕಾಯದಡಿಯಲ್ಲಿನ Specialized Programmeಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ |
| ತೀರ್ಮಾನ | **ಕಾವೇರಿ ಕಾಲೇಜ್ ಆಫ್ ಸೈನ್ಸ್ & ಮೆನೇಜ್‌ಮೆಂಟ್, ಮೈಸೂರು ಸಂಸ್ಥೆಯು Specialized Programme ಅಡಿಯಲ್ಲಿ Bachelor of Hospital Management (BHM) ಕೋರ್ಸ್‌ನ ದ್ವಿತೀಯ ಮತ್ತು ತೃತೀಯ ವರ್ಷದ ಪಠ್ಯಕ್ರಮಕ್ಕೆ ಅಧ್ಯಯನ ಮಂಡಳಿಯ ಶಿಫಾರಸ್ಸುಗಳನ್ನು ವಾಣಿಜ್ಯ ನಿಕಾಯ ವಾರ್ಷಿಕ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| | |
|---|---|
| ಸಾಮಾನ್ಯ ಸಭೆ 2025/2.2 | ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗೆಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 50(1) ಪ್ರಕಾರ ಸಿದ್ಧಪಡಿಸಿರುವ ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿ ಸರ್ಕಾರಕ್ಕೆ ಸಲ್ಲಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2025/2.3 | 2024-25ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 47(2) ಪ್ರಕಾರ ಸಿದ್ಧಪಡಿಸಿರುವ ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2025/2.4 | 2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಪ್ರಕರಣ 47(3)ರಡಿ 2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಯನ್ನು ಅನುಮೋದಿಸಿ ಸರ್ಕಾರಕ್ಕೆ ಮತ್ತು ಲೆಕ್ಕಪರಿಶೋಧಕರಿಗೆ ಕಳುಹಿಸಲು ಶಿಕ್ಷಣ ಮಂಡಳ ಸಭೆಯು ತೀರ್ಮಾನಿಸಿತು. |
| ಸಾಮಾನ್ಯಸಭೆ 2025/2.5 | FCBCS ಪದ್ಧತಿಯ ಅಧ್ಯಯನ ವಿಭಾಗಗಳಲ್ಲಿ CBCS ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ. |
| | ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಆರು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ ಗಣಕ ವಿಜ್ಞಾನ, ಸಂಖ್ಯಾಶಾಸ್ತ್ರ, ಗಣಿತಶಾಸ್ತ್ರ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ ಮತ್ತು ಜೆನೆಟಿಕ್ಸ್ ಅಂಡ್ ಜಿನೋಮಿಕ್ಸ್‌ಗಳಲ್ಲಿ 2017-2018 ರಿಂದ FCBCS ಪದ್ಧತಿಯನ್ನು ಜಾರಿಗೊಳಿಸಲಾಯಿತು. FCBCS ಪದ್ಧತಿಯಲ್ಲಿ ಮೌಲ್ಯಮಾಪನ ಕಾರ್ಯ ವಿಳಂಬವಾಗುತ್ತಿದ್ದು, CBCS ಪದ್ಧತಿಯಲ್ಲಿ ಮತ್ತು FCBCS ಪದ್ಧತಿಯಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದ ಕಾರಣ, ಮಾನ್ಯ ಕುಲಪತಿಯವರ ಸಮ್ಮುಖದಲ್ಲಿ ನಡೆಸಲಾದ ಸಭೆಯಲ್ಲಿ "ಒಂದು ವಿಶ್ವವಿದ್ಯಾನಿಲಯ, ಒಂದೇ ಪರೀಕ್ಷೆ" ಎಂಬ ವಿಧಾನವನ್ನು ಜಾರಿಗೆ ತರಲು ತೀರ್ಮಾನಿಸಲಾಯಿತು. ಈ ಸಂಬಂಧ FCBCS ಪದ್ಧತಿಯ ಅಧ್ಯಯನ ವಿಭಾಗಗಳ ಅಧ್ಯಕ್ಷರು 2025-26ನೇ ಸಾಲಿನಿಂದ FCBCS ಪದ್ಧತಿಯ ಬದಲು CBCS ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಿದ್ಧರಿರುವುದಾಗಿ ಶಿಫಾರಸ್ಸು ಮಾಡಿರುತ್ತಾರೆ ಎಂಬುದನ್ನು ಸಭೆಯಲ್ಲಿ ಮಂಡಿಸಿದರು.<br><br>**ಪ್ರೊ**. ಕೆ. ನಾಗೇಂದ್ರ ಬಾಬು, ಡೀನರು, ವಾಣಿಜ್ಯ ನಿಕಾಯ ಇವರು ಮಾತನಾಡಿ, ವಾಣಿಜ್ಯ ಅಧ್ಯಯನ ವಿಭಾಗದ ವಿಭಾಗೀಯ ಮಂಡಳ ಸಭೆಯಲ್ಲಿ FCBCS ಪದ್ಧತಿಯನ್ನು ಮುಂದುವರೆಸಬೇಕೆಂದು ಅಧ್ಯಾಪಕರುಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಆದರೆ ಅಧ್ಯಯನ ವಿಭಾಗದ ಅಧ್ಯಕ್ಷರು FCBCS ಪದ್ಧತಿಯ ಬದಲಾಗಿ CBCS ಪದ್ಧತಿಯನ್ನು ಅಳವಡಿಸಿಕೊಳ್ಳುವುದಾಗಿ ಶಿಫಾರಸ್ಸು ಮಾಡಿರುತ್ತಾರೆ. ಅಧ್ಯಯನ ವಿಭಾಗದ ವಿಭಾಗೀಯ ಮಂಡಳ ಸಭೆಯ ನಡವಳಿಯಲ್ಲಿ ಅಧ್ಯಕ್ಷರನ್ನು ಹೊರತುಪಡಿಸಿ, ಉಳಿದ ಅಧ್ಯಾಪಕರುಗಳು ಸಹಿಯನ್ನು ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಾ M.Com. in Financial Services ಪ್ರೋಗ್ರಾಂಗೆ ಅಗತ್ಯಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಿರುವುದರಿಂದ, 20+20+20 ಹಾಗೂ ಪರೀಕ್ಷೆ 40 ಅಂಕಕ್ಕೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಒಲವು ತೋರಿಸಿರುತ್ತಾರೆ, M.Com. in Financial Services ಪ್ರೋಗ್ರಾಂ ಸ್ವಯಂ ಹಣಕಾಸು ಯೋಜನೆಯಲ್ಲಿ ನಡೆಯುತ್ತಿದ್ದು, FCBCS ಪದ್ಧತಿಯನ್ನು ಮುಂದುವರೆಸಬೇಕೆಂದು ಕೋರಿದರು. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ, FCBCS ಪದ್ಧತಿ ಅಳವಡಿಸಿಕೊಂಡಿರುವ ವಿಭಾಗಗಳು ನಡೆಸುವ ಪರೀಕ್ಷೆಗಳು ಮತ್ತು ವಿಶ್ವವಿದ್ಯಾನಿಲಯ ನಡೆಸುವ ಪರೀಕ್ಷೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬರದ ಕಾರಣ "ಒಂದು ವಿಶ್ವವಿದ್ಯಾನಿಲಯ, ಒಂದೇ ಪರೀಕ್ಷೆ" ಎಂಬ ವಿಧಾನವನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆಯೆಂದು ತಿಳಿಸಿದರು.<br><br>ಪ್ರೊ. ಜಿ.ಆರ್.ಜನಾರ್ಧನ್, ಪ್ರೊ. ಎಸ್.ರವಿ, ಮತ್ತು ಪ್ರೊ. ಜೆ.ಸೋಮಶೇಖರ್‌ರವರು ಮಾತನಾಡಿ, "ಒಂದು ವಿಶ್ವವಿದ್ಯಾನಿಲಯ, ಒಂದೇ ಪರೀಕ್ಷೆ" ಎಂಬ ವಿಧಾನವನ್ನು ಜಾರಿಗೆ ತರಲು ತಮ್ಮ ಸಹಮತವಿದೆಯೆಂದು ತಿಳಿಸಿದರು.<br><br>ಪ್ರೊ. ಎಸ್.ರವಿರವರು ಮಾತನಾಡಿ, ವಿಭಾಗಗಳಲ್ಲಿ 20+20+20ರಂತೆ $C_1$, $C_2$, $C_3$ ಬರೆದು ಪರೀಕ್ಷೆಯನ್ನು 40 ಅಂಕಕ್ಕೆ ಬರೆಯುವ ಪದ್ಧತಿಗೆ ಹೆಚ್ಚು ವಿದ್ಯಾರ್ಥಿಗಳು ಆಸಕ್ತಿ ಹೊಂದಿರುವುದು ಕಂಡುಬಂದಿದೆ. ಆದರೂ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧರಾಗುತ್ತೇವೆಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಪರೀಕ್ಷೆಗಳಲ್ಲಿ ಏಕರೂಪ ಪದ್ಧತಿ ಅಳವಡಿಸುವುದರಿಂದ ಸ್ವಯಂ ಹಣಕಾಸು ಯೋಜನೆಯನ್ನು ಅಭಿವೃದ್ಧಿ ಪಡಿಸಿದಂತಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಅಧ್ಯಯನ ವಿಭಾಗದಲ್ಲಿ M.Com. ಮತ್ತು M.Com. in Financial Services ಪ್ರೋಗ್ರಾಂಗಳು ನಡೆಯುತ್ತಿದ್ದು, M.Com. ಪ್ರೋಗ್ರಾಂನ್ನು CBCS ಪದ್ಧತಿಯಲ್ಲಿ ಅಳವಡಿಸಿಕೊಳ್ಳಲಾಗುವುದು. ಆದರೆ M.Com. in Financial Services ಪ್ರೋಗ್ರಾಂ ಸ್ವಯಂ ಹಣಕಾಸು ಯೋಜನೆಯಲ್ಲಿ ನಡೆಯುತ್ತಿದ್ದು, corporate ವಲಯಗಳಲ್ಲಿ ಕಾರ್ಯವೈಖರಿಗಳು ಬದಲಾವಣೆಯಾಗುತ್ತಿರುವ ಹಿನ್ನೆಲೆಯಲ್ಲಿ FCBCS ಮುಂದುವರೆಸುವುದು ಸೂಕ್ತವೆಂದರು.<br><br>ಈ ಸಂಬಂಧ ಪ್ರಾಧ್ಯಾಪಕರುಗಳಾದ ಪ್ರೊ. ಎಸ್.ರವಿ, ಪ್ರೊ. ಜೆ.ಸೋಮಶೇಖರ್, ಪ್ರೊ. ರೇವಣ್ಣಸಿದ್ದಪ್ಪ ಮತ್ತು ಪ್ರೊ. ಕೆಂಪರಾಜು ಅವರುಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಎಂ.ಕಾಂ .ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಮಾತ್ರ M.Com. in Financial Services ಪ್ರೋಗ್ರಾಂನ್ನು ನಡೆಸುತ್ತಿರುವುದರಿಂದ ಸದರಿ ಪ್ರೋಗ್ರಾಂಗೆ ಅನ್ವಯಿಸುವಂತೆ FCBCS ಪದ್ಧತಿಯನ್ನು ಮುಂದುವರೆಸಲು ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿದರು. |
| **ತೀರ್ಮಾನ** | ವಾಣಿಜ್ಯ ಅಧ್ಯಯನ ವಿಭಾಗದ M.Com.in Financial Services ಪ್ರೋಗ್ರಾಂನ್ನು ಹೊರತುಪಡಿಸಿ ಮೈಸೂರು ವಿಶ್ವವಿದ್ಯಾನಿಲಯದ FCBCS ಪದ್ಧತಿಯ ಆರು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ ಗಣಕ ವಿಜ್ಞಾನ, ಸಂಖ್ಯಾಶಾಸ್ತ್ರ, ಗಣಿತಶಾಸ್ತ್ರ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ ಮತ್ತು ಜೆನೆಟಿಕ್ಸ್ ಅಂಡ್ ಜಿನೋಮಿಕ್ಸ್ ಪ್ರೋಗ್ರಾಂಗಳನ್ನು (ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳಿಗೆ ಈ ಹಿಂದೆ ಇದ್ದ FCBCS ಪದ್ಧತಿಯಂತೆಯೇ) 2025-26ನೇ ಶೈಕ್ಷಣಿಕ ಸಾಲಿನಿಂದ ಇನ್ನುಳಿದ ಅಧ್ಯಯನ ವಿಭಾಗಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ CBCS ಪದ್ಧತಿಯನ್ನು ಅಳವಡಿಸಿಕೊಳ್ಳಲು ವಿದ್ಯಾವಿಷಯಕ ಪರಿಷತ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2025/2.6 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಕರೀಗೌಡ ಹಾಗೂ ಶ್ರೀಮತಿ ಚಿಕ್ಕತಾಯಮ್ಮ ಚಿನ್ನದ ಪದಕ ದತ್ತಿ" ಸ್ಥಾಪನೆ ಮಾಡುವ ಬಗ್ಗೆ. |
| | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇಕಡ 20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇಕಡ 80ರಷ್ಟು ಬಡ್ಡಿಯ ಹಣವನ್ನು ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಷಯದಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಎರಡನೆಯ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ಪ್ರದಾನ ಮಾಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಕರೀಗೌಡ ಹಾಗೂ ಶ್ರೀಮತಿ ಚಿಕ್ಕತಾಯಮ್ಮ ಚಿನ್ನದ ಪದಕ ದತ್ತಿ" ಸ್ಥಾಪಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

ಇತರೆ ವಿಷಯಗಳು:

1. ಶ್ರೀ ಕೆ. ವಿವೇಕಾನಂದ, ವಿಧಾನ ಪರಿಷತ್ ಸದಸ್ಯರು, ದಕ್ಷಿಣ ಶಿಕ್ಷಕರ ಕ್ಷೇತ್ರ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿದಾರರಿಗೆ ಪಿಂಚಣಿ ನೀಡಲು ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳುವ ಸಂಬಂಧ ವಿಶ್ವವಿದ್ಯಾನಿಲಯದಿಂದ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆಯೆಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿದಾರರರಿಗೆ ಪ್ರತಿ ಮಾಹೆ 9.5 ಕೋಟಿ ರೂ.ಗಳು ಹಾಗೂ ಇತರೆ ಭತ್ಯೆಗಳು ಸೇರಿದಂತೆ ವಾರ್ಷಿಕ 114.00 ಕೋಟಿ ರೂ.ಗಳಗೂ ಹೆಚ್ಚುವರಿಯಾಗಿ ಹಣ ಬೇಕಾಗುತ್ತದೆ. ಈ ಸಂಬಂಧ ಸರ್ಕಾರವು ವಾರ್ಷಿಕ 50.00 ಕೋಟಿ ರೂ.ಗಳನ್ನು ನೀಡುತ್ತಿದ್ದು, ಉಳಿಕೆ ಹಣವನ್ನು ಸಹ ಬಿಡುಗಡೆ ಮಾಡುವಂತೆ ಕೋರಿ ಈಗಾಗಲೇ ಸರ್ಕಾರಕ್ಕೆ ಹಲವಾರು ಬಾರಿ ಪತ್ರಗಳನ್ನು ಬರೆಯಲಾಗಿದೆಂದು ತಿಳಿಸಿದರು.

ಶ್ರೀ ಕೆ. ವಿವೇಕಾನಂದ ಇವರು ಮಾತನಾಡಿ, ಈ ಮೊದಲು ಪಿಂಚಣಿಯನ್ನು ಪಿಂಚಣಿದಾರರಿಗೆ ಹೇಗೆ ನೀಡಲಾಗುತ್ತಿತ್ತು ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಈ ಮೊದಲು ವಿಶ್ವವಿದ್ಯಾನಿಲಯದ ಸರ್‌ಪ್ಲೆಸ್ ಖಾತೆಯಲ್ಲಿ ಜಮೆಯಾಗಿರುವ ಹಣವನ್ನು ಎಲ್‌ಐಸಿಯಲ್ಲಿ ಹೂಡಿಕೆ (ಕಾರ್ಪಸ್ ಫಂಡ್) ಮಾಡಲಾಗಿತ್ತು. ಕಳೆದ ನಾಲ್ಕೈದು ವರ್ಷಗಳಿಂದ ಸರ್ಕಾರವು ಕೇವಲ 40%ರಷ್ಟು ಮಾತ್ರ ಪಿಂಚಣಿ ಹಣವನ್ನು ಬಿಡುಗಡೆ ಮಾಡುತ್ತಿದ್ದು, ಜನವರಿ 2025ರಿಂದ ವಯೋನಿವೃತ್ತಿ ಹೊಂದಿದ ಉದ್ಯೋಗಿಗಳಿಗೆ ಯಾವುದೇ ರೀತಿಯ ಪಿಂಚಣಿ ಸೌಲಭ್ಯಗಳನ್ನು ವಿಶ್ವವಿದ್ಯಾನಿಲಯವು ಪಾವತಿಸಿರುವುದಿಲ್ಲ. ಕೇವಲ ಸದರಿ ಉದ್ಯೋಗಿಗಳಿಗೆ ವಯೋನಿವೃತ್ತಿಗೊಂಡ ದಿನಾಂಕದಿಂದ ಮುಂದಕ್ಕೆ ಮಾಸಿಕ ಪಿಂಚಣಿಯನ್ನು ಮಾತ್ರ ನೀಡಲಾಗಿದೆ. ಸರ್ಕಾರವು ಪಿಂಚಣಿಗೆ ಕೇವಲ 40 ರಿಂದ 50ರಷ್ಟು ಅನುದಾನವನ್ನು ಮಾತ್ರ ನೀಡುತ್ತಿರುವುದರಿಂದ ಸರ್ಕಾರದ ಸೂಚನೆಯಂತೆ ಕಳೆದ ನಾಲ್ಕೈದು ವರ್ಷಗಳಿಂದ ವಿಶ್ವವಿದ್ಯಾನಿಲಯ ಎಲ್‌ಐಸಿಯಲ್ಲಿ ಹೂಡಿಕೆ ಮಾಡಿರುವ ಹಣವನ್ನು (amount) ಸೇರಿಸಿ ಪಿಂಚಣಿ ನೀಡುತ್ತಿದ್ದು, ಪ್ರಸ್ತುತ ಎಲ್‌ಐಸಿಯಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಸಹ ಸಂಪೂರ್ಣವಾಗಿ ಪಿಂಚಣಿಗಾಗಿ ವಿನಿಯೋಗಿಸಿರುವುದರಿಂದ ಪ್ರಸ್ತುತ ಸದರಿ ಹಣವು ಸಹ ಖಾಲಿಯಾಗಿರುತ್ತದೆ ಎಂದು ತಿಳಿಸಿದರು

ಮಾನ್ಯ ಕುಲಪತಿಯವರು ಮಾತನಾಡಿ, ಮೊದಲು ಪೂರ್ಣ ಪ್ರಮಾಣದ ಪಿಂಚಣಿಯ ಅನುದಾನವನ್ನು ಸರ್ಕಾರದ ವತಿಯಿಂದ ಬಿಡುಗಡೆಯಾಗುತ್ತಿತ್ತು. ಕೋವಿಡ್ ಅವಧಿಯಿಂದ ಸರ್ಕಾರ ಶೇಕಡ 50 ರಷ್ಟು ಮಾತ್ರ ಅನುದಾನವನ್ನು ನೀಡುತ್ತಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯ ಪಿಂಚಣಿದಾರರಿಗೆ ಪಿಂಚಣಿ ನೀಡಲು ವಾರ್ಷಿಕ ರೂ. 157.00 ಕೋಟಿಗಳು ಬೇಕಾಗಿರುತ್ತದೆ. ಆದರೆ ನಾವು ಸರ್ಕಾರವನ್ನು ಸಂಪೂರ್ಣ ಪಿಂಚಣಿಗೆ ಬೇಕಾಗುವ ಅನುದಾನವನ್ನು ಒದಗಿಸುವಂತೆ ಕೋರಿದರೂ ಸಹ ಸರ್ಕಾರ ವಾರ್ಷಿಕ ರೂ. 50.00 ಕೋಟಿಗಳನ್ನು ಮಾತ್ರ ನೀಡಿರುತ್ತದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸರ್ಕಾರವು ವಾರ್ಷಿಕ 50.00 ಕೋಟಿ ರೂ.ಗಳನ್ನು ಒಟ್ಟಾಗಿ ಬಿಡುಗಡೆ ಮಾಡದೇ ಮೂರು ತಿಂಗಳಿಗೊಮ್ಮೆ ಹಂತ ಹಂತವಾಗಿ ಬಿಡುಗಡೆ ಮಾಡುತ್ತಿದೆ. ಈಗಾಗಲೇ ಸರ್ಕಾರವು ವಿಶ್ವವಿದ್ಯಾನಿಲಯಕ್ಕೆ 03 ಕಂತಿನ ಹಣ ಬಿಡುಗಡೆ ಮಾಡಲಾಗಿದ್ದು, ನಾಲ್ಕನೇ ಕಂತಿನ ಹಣವು ಡಿಸೆಂಬರ್‌ನಲ್ಲಿ ಬಿಡುಗಡೆ ಮಾಡುವ ನಿರೀಕ್ಷೆ ಇದೆ. ವಿಶ್ವವಿದ್ಯಾನಿಲಯದ ಇತರೆ ಮೂಲಗಳಿಂದ ಕ್ರೋಢಿಕೃತವಾಗುವ ಆಂತರಿಕ ಸಂಪನ್ಮೂಲವನ್ನು ವಿಶ್ವವಿದ್ಯಾನಿಲಯದ ನಿರ್ವಹಣೆ ಹಾಗೂ ತಾತ್ಕಾಲಿಕ ಬೋಧಕೇತರ/ ಅತಿಥಿ ಉಪನ್ಯಾಸಕರಿಗೆ ವೇತನ ಹಾಗೂ ಇತ್ಯಾದಿ ವೆಚ್ಚಗಳಿಗೆ ನೀಡಲಾಗುತ್ತಿದೆಯೆಂದರು.

ಶ್ರೀ ಕೆ.ವಿವೇಕಾನಂದ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿದಾರರಿಗೆ ಪಿಂಚಣಿ ಅನುದಾನವನ್ನು ಬಿಡುಗಡೆ ಮಾಡುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಉನ್ನತ ಶಿಕ್ಷಣ ಸಚಿವರಿಗೆ ನಾನು ಸಹ ಮನವಿ ಸಲ್ಲಿಸಿ ಚರ್ಚಿಸುವುದಾಗಿ ತಿಳಿಸಿದರು. ಈ ಸಂಬಂಧ ಅಗತ್ಯ ದಾಖಲೆಗಳೊಂದಿಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಉನ್ನತ ಶಿಕ್ಷಣ ಸಚಿವರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಮತ್ತೊಮ್ಮೆ ಪತ್ರ ಬರೆಯುವಂತೆ ತಿಳಿಸುತ್ತಾ, ಸದರಿ ಪತ್ರದ ಪ್ರತಿಯನ್ನು ನನಗೂ ಸಹ ನೀಡುವಂತೆ ತಿಳಿಸಿದರು.

2. ಡಾ. ಅಂತೋನಿ ಪೌಲ್ ರಾಜ್.ಸಿರವರು ಮಾತನಾಡಿ, ಸಂಯೋಜಿತ ಕಾಲೇಜುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಸಮಸ್ಯೆಗಳನ್ನು ಬಗೆಹರಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಸಂಯೋಜನೆಯನ್ನು ಮುಂದುವರೆಸುವ ಸಂಬಂಧ ಈಗಾಗಲೇ ಸಮಿತಿ ಇರುವುದರಿಂದ, ಸದರಿ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಲೇಜುಗಳಲ್ಲಿರುವ ಶೈಕ್ಷಣಿಕ ಹಾಗೂ ಇತರೆ ಎಲ್ಲಾ ಚಟುವಟಿಕೆಗಳನ್ನು ಪರಾಮರ್ಶಿಸುವುದರಿಂದ ಮತ್ತೊಂದು ಸಮಿತಿಯನ್ನು ರಚಿಸುವ ಅಗತ್ಯವಿಲ್ಲವೆಂದು ತಿಳಿಸಿದರು.

3. ಶ್ರೀ ದರ್ಶನ್ ಡಿ ಇವರು ಮಾತನಾಡಿ, ಪಿಹೆಚ್.ಡಿ. ಶೀರ್ಷಿಕೆ ಬದಲಾವಣೆಗೆ ಶುಲ್ಕವನ್ನು ನಿಗದಿಗೊಳಿಸಿರುವುದರ ಕುರಿತು ವಿಚಾರಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪಿಹೆಚ್.ಡಿ. ನಿಯಮದ ಪ್ರಕಾರ ಪಿಹೆಚ್.ಡಿ. ನೋಂದಣಿ ಸಂದರ್ಭದಲ್ಲಿಯೇ ಸಂಶೋಧನಾ ವಿದ್ಯಾರ್ಥಿಯು ಪಿಹೆಚ್.ಡಿ ಶೀರ್ಷಿಕೆ ಅಂತಿಮಗೊಳಿಸಿರಬೇಕು. ಅಂತಿಮ ಹಂತದಲ್ಲಿ ಶೀರ್ಷಿಕೆ ಬದಲಾವಣೆಗೆ ಪತ್ರ ಬರುತ್ತಿರುವುದರಿಂದ ಪಿಹೆಚ್.ಡಿ. ಶೀರ್ಷಿಕೆ ಬದಲಾವಣೆಗೆ ಸಹ ಶುಲ್ಕವನ್ನು ನಿಗದಿಪಡಿಸಿರುವುದಾಗಿ ತಿಳಿಸಿದರು.

4. ಪ್ರೊ. ಎಸ್.ರವಿರವರು ಮಾತನಾಡಿ, ಕೆಲವು ವಿಭಾಗಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗುತ್ತಿದೆ. ಯಾವ ಯಾವ ವಿಭಾಗದಲ್ಲಿ ಪ್ರವೇಶಾತಿ ಕಡಿಮೆಯಾಗುತ್ತಿದೆ ಅಂತಹ ವಿಭಾಗಗಳಲ್ಲಿ ಶೇಕಡ 50ರಂತೆ ಇತರೆ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದಾಗಿ ಒಂದು ಜಾಹೀರಾತು ನೀಡಬೇಕೆಂದು ತಿಳಿಸಿದರು. ಮುಂದುವರೆದು Seat Matrix ನಲ್ಲಿ ವಿಶೇಷ ಅವಕಾಶ ನೀಡಲಾಗಿದೆಯೆಂದು ನಮೂದಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎಲ್ಲೆಲ್ಲಿ ಪ್ರವೇಶಾತಿ ಕಡಿಮೆಯಾಗಿದೆ ಅಂತಹ ವಿಭಾಗಗಳಲ್ಲಿ ಶೇಕಡ 50ರಂತೆ ಇತರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬಹುದಾಗಿದೆ, ಇದರಿಂದ ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ವಿದ್ಯಾರ್ಥಿಗಳಿಗೂ ಸಹಾಯಕವಾಗಬಹುದು ಎಂದು ತಿಳಿಸಿದರು.

5. ಪ್ರೊ. ಎಂ.ಎಸ್. ಶೇಖರ್, ಡೀನರು, ಕಲಾ ನಿಕಾಯ ಇವರು ಮಾತನಾಡಿ, ಪಿಹೆಚ್.ಡಿ. ಮಾರ್ಗದರ್ಶಕರ ಕುರಿತು ಖಾಸಗಿ ಕಾಲೇಜಿನಲ್ಲಿ ಯುಜಿಸಿ ನಿಯಮಾವಳಿ ಪ್ರಕಾರ ಆಡಳಿತ ಮಂಡಳಿ ಮುಖೇನ ನೇಮಕಗೊಂಡಿರುವ ಅಧ್ಯಾಪಕರುಗಳಿಗೆ ಪಿಹೆಚ್.ಡಿ. ಮಾರ್ಗದರ್ಶಕರಾಗಿ ನೇಮಿಸುವುದಕ್ಕೆ ಕಳೆದ ಸಭೆಯಲ್ಲಿಯೇ ಚರ್ಚೆಯಾಗಿರುತ್ತದೆ. ಖಾಸಗಿ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಮುಖೇನ ನೇಮಕವಾಗಿರುವ ಅಧ್ಯಾಪಕರುಗಳಿಗೆ ಪಿಹೆಚ್.ಡಿ. ಮಾರ್ಗದರ್ಶನ ನೀಡಲಾಗಿದೆ. ಅಧ್ಯಯನ ಮಂಡಳಿಯ ಸದಸ್ಯರನ್ನು ವಿಚಾರಿಸಿರುತ್ತೇನೆ, ಖಾಸಗಿ ಕಾಲೇಜಿನ ಆಡಳಿತ ಮಂಡಳಿಯಿಂದ ಪಿಹೆಚ್.ಡಿ. ಮಾರ್ಗದರ್ಶನಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಸರ್ಕಾರಿ ಕಾಲೇಜುಗಳಿಗೆ ಪಿಹೆಚ್.ಡಿ. ಮಾರ್ಗದರ್ಶನಕ್ಕೆ ಅವಕಾಶ ಮಾಡಿಕೊಟ್ಟಿರುವುದಿಲ್ಲ. ಅವರು ಹೆಚ್ಚು ಪರಿಣಿತರಾಗಿದ್ದು, 10 ರಿಂದ 15 ವರ್ಷಗಳ ಸೇವೆ ಸಲ್ಲಿಸಿರುತ್ತಾರೆ. ಅವರಿಗೆ ಮಾತ್ರ ಪಿಹೆಚ್.ಡಿ. ಮಾರ್ಗದರ್ಶಕರಾಗಿ ಅವಕಾಶ ಮಾಡಿಕೊಟ್ಟಿರುವುದಿಲ್ಲ, ಆದರೆ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಯಿಂದ ಪಿಹೆಚ್.ಡಿ. ಮಾರ್ಗದರ್ಶನಕ್ಕೆ ಅವಕಾಶ ನೀಡಿರುತ್ತಾರೆ. ಇವರು ಗುಣಮಟ್ಟದ ಪಿಹೆಚ್.ಡಿ. ಮಾರ್ಗದರ್ಶನ ಮಾಡುವಲ್ಲಿ ವಿಫಲರಾಗುತ್ತಾರೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಖಾಸಗಿ ಕಾಲೇಜುಗಳಲ್ಲಿ ಪಿಹೆಚ್.ಡಿ ಮಾರ್ಗದರ್ಶನಕ್ಕೆ ಅವಕಾಶ ನೀಡಲಾಗಿದೆ. ಆದರೆ ಸದರಿ ಅಧ್ಯಾಪಕರುಗಳಿಗೆ ಯುಜಿಸಿ ವೇತನ ನೀಡುತ್ತಿರುವುದಿಲ್ಲ. ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳು ಒಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಿಂದ ಮತ್ತೊಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ವರ್ಗಾವಣೆಗೊಳ್ಳುವುದರಿಂದ, ಸದರಿ ಅಧ್ಯಾಪಕರುಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿದ್ದಲ್ಲಿ, ವರ್ಗಾವಣೆಗೊಂಡ ಸಂದರ್ಭದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುವುದರಿಂದ ಮಾರ್ಗದರ್ಶಕರಾಗಿ ಅವಕಾಶ ನೀಡಿರುವುದಿಲ್ಲ. ಮುಂದುವರೆದು ಆಯಾಯ ಅಧ್ಯಯನ ಮಂಡಳಿಗಳಲ್ಲಿ ಚರ್ಚಿಸಿ ಶಿಫಾರಸ್ಸು ಮಾಡಲು ಅವಕಾಶವಿದೆ. ಮಾರ್ಗದರ್ಶಕರು ಗುಣಮಟ್ಟದ ಸಂಶೋಧನಾ ಕಾರ್ಯಗಳಿಗೆ ಮಾರ್ಗದರ್ಶಕರಾಗಲು ವಿಫಲರಾದರೆ ಅಧ್ಯಯನ ಮಂಡಳಿಯು ತಿರಸ್ಕರಿಸಬಹುದೆಂದು ತಿಳಿಸಿದರು.

6. ಡಾ.ರಾಕೇಶ್ ಇವರು ಮಾತನಾಡಿ, ಸಂಶೋಧನಾ ಸಲಹಾ ಸಮಿತಿ (Research Advisory Committee) ರಚಿಸುವಂತೆ ಕೋರಿದರು. ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತಿ 6 ತಿಂಗಳಿಗೊಮ್ಮೆ ಆಂತರಿಕ ಸಂದರ್ಶನದ ಮೂಲಕ ಅವರ ಸಂಶೋಧನೆ ಕುರಿತಾಗಿ ಪರಿಶೀಲಿಸುವ ಕಾರ್ಯವಾಗಬೇಕಾಗಿದೆ. ಈ ಸಮಿತಿಯಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಅವಧಿಯಲ್ಲಿ ಸಂಶೋಧನೆಯನ್ನು ಪೂರ್ಣಗೊಳಿಸಲು ತಿಳಿಸುವುದು, ಇದರಿಂದ ಪಿಹೆಚ್.ಡಿ.ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದಕ್ಕೆ ಸಾಧ್ಯವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಡಾಕ್ಟೊರಲ್ ಸಮಿತಿ ಇರುವುದಾಗಿ ತಿಳಿಸುತ್ತಾ, ಅಧ್ಯಯನ ಮಂಡಳಿ, ವಿಭಾಗದ ಅಧ್ಯಕ್ಷರು ಹಾಗೂ ಮಾರ್ಗದರ್ಶಕರು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ನಿಗದಿತ ಅವಧಿಯೊಳಗೆ ಸಂಶೋಧನೆಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಬೇಕಾಗಿರುತ್ತದೆಯೆಂದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, 05 ವರ್ಷ ಅವಧಿ ಪೂರ್ಣಗೊಳಿಸಿ, ಸಂಶೋಧನೆಯ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸದೆ ನಾಪತ್ತೆಯಾದ ಸಂಶೋಧನಾ ವಿದ್ಯಾರ್ಥಿಗಳು ಒಟ್ಟು 39 ವಿದ್ಯಾರ್ಥಿಗಳಿದ್ದು ಹಾಗೂ 07 ವರ್ಷ ಅವಧಿ ಪೂರ್ಣಗೊಳಿಸಿ ಸಂಶೋಧನೆಯ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸದೇ ಇರುವ ಸಂಶೋಧನಾ ವಿದ್ಯಾರ್ಥಿಗಳು ಸಹ ಇರುವರೆಂದು ಸಭೆಯ ಗಮನಕ್ಕೆ ತಂದರು.

ಪ್ರೊ. ಜೆ.ಸೋಮಶೇಖರ್‌ರವರು ಮಾತನಾಡಿ, ಮಾರ್ಗದರ್ಶಕರು ಸಂಶೋಧನಾ ವಿದ್ಯಾರ್ಥಿಗೆ ನಿಗದಿತ ಅವಧಿಯೊಳಗೆ ಮಹಾಪ್ರಬಂಧವನ್ನು ಸಲ್ಲಿಸುವಂತೆ ತಿಳಿಸಿದ್ದರೂ ಸಹ ಕೆಲವು ಸಂಶೋಧನಾ ವಿದ್ಯಾರ್ಥಿಗಳು ಅವಧಿ ಮೀರಿದ ನಂತರ ಮಹಾಪ್ರಬಂಧವನ್ನು ಸಿದ್ಧಪಡಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಹೆಚ್ಚಿನ ಕಾಲಾವಕಾಶವನ್ನು ನೀಡುವಂತೆ ಮಾನ್ಯ ಕುಲಪತಿಯವರಲ್ಲಿ ಹಾಗೂ ಕುಲಸಚಿವರು (ಪರೀಕ್ಷಾಂಗ) ಇವರಲ್ಲಿ ಮನವಿ ಮಾಡಿಕೊಂಡಾಗ ಮಾತ್ರ ವಿಳಂಬ ಶುಲ್ಕವನ್ನು ವಿಧಿಸಲಾಗುತ್ತಿದೆಯೇ ಹೊರತು ಯಾವುದೇ ಹೆಚ್ಚುವರಿ ಶುಲ್ಕವನ್ನು ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಮೇಲೆ ಹೇರಿಕೆ ಮಾಡುತ್ತಿರುವುದಿಲ್ಲವೆಂದು ಸಭೆ ಗಮನಕ್ಕೆ ತಂದರು.

ಪ್ರೊ. ಎಂ.ಎಸ್ ಶೇಖರ್ ಇವರು ಮಾತನಾಡಿ, ಸಂಶೋಧನೆಯ ಮಾರ್ಗದರ್ಶಕರು ಸಂಶೋಧನಾ ವಿದ್ಯಾರ್ಥಿಗಳ ಕಾರ್ಯವೈಖರಿಗಳನ್ನು ಗಮನಿಸಬೇಕು, ಒಂದು ವೇಳೆ ವಿದ್ಯಾರ್ಥಿಗಳು ನಿಗದಿತ ಅವಧಿಯೊಳಗೆ ಸಂಶೋಧನಾ ವರದಿಯನ್ನು ಸಿದ್ಧಪಡಿಸದಿದ್ದಲ್ಲಿ, ವರದಿಯಲ್ಲಿ ತೃಪ್ತಿಕರವಾಗಿರುವುದಿಲ್ಲ ಎಂದು ನಮೂದಿಸುವುದರಿಂದ, ಸಂಶೋಧನಾ ವಿದ್ಯಾರ್ಥಿಗಳಿಗೆ ಕಡಿವಾಣ ಹಾಕಬಹುದಾಗಿದೆ. ವಿನಾಕಾರಣ ವಿಶ್ವವಿದ್ಯಾನಿಲಯಕ್ಕೆ ದೂರುವುದರಿಂದ ಯಾವುದೇ ಪ್ರಯೋಜನ ಇರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ನಿಗದಿತ ಅವಧಿಯಲ್ಲಿ ಮಹಾಪ್ರಬಂಧವನ್ನು ಸಲ್ಲಿಸದೇ ಇರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರು ನಿಗದಿತ ವೇಳೆಯಲ್ಲಿಯೇ ಮಹಾಪ್ರಬಂಧವನ್ನು ಸಲ್ಲಿಸುವಂತೆ ನಿರ್ದೇಶನ ನೀಡಬೇಕೆಂದು ತಿಳಿಸಿದರು.

7. ಪ್ರೊ. ಸೋಮಶೇಖರ್‌ರವರು ಮಾತನಾಡಿ, ಪಿಹೆಚ್.ಡಿ.ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿಶೇಷ ಘಟಕದಿಂದ 5 ವರ್ಷಗಳಾದರೂ ಪಿಹೆಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು ಸಲ್ಲಿಸದೇ ಇರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಯಾವ ಕ್ರಮವಹಿಸಲಾಗಿದೆಯೆಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, 5 ರಿಂದ 7 ವರ್ಷಗಳಾದರೂ ಪಿಹೆಚ್.ಡಿ. ಮಹಾಪ್ರಬಂಧವನ್ನು ಮಂಡಿಸದೇ ಇರುವಂತಹ ಸಂಶೋಧನಾ ವಿದ್ಯಾರ್ಥಿಗಳಿಗೆ ಡಿಸೆಂಬರ್ 31, 2025ರೊಳಗೆ ಮಹಾಪ್ರಬಂಧವನ್ನು ಸಲ್ಲಿಸಲು ಹೆಚ್ಚಿನ ಕಾಲಾವಕಾಶವನ್ನು ನೀಡಿದೆ. ಒಂದು ವೇಳೆ ಸದರಿ ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ನೀಡಿರುವ ಅವಧಿಯೊಳಗೂ ಸಹ ಮಹಾಪ್ರಬಂಧವನ್ನು ಸಲ್ಲಿಸಲು ವಿಫಲವಾದಲ್ಲಿ ಸದರಿ ಸಂಶೋಧನಾರ್ಥಿಗಳ ನೊಂದಣಿಯನ್ನು ರದ್ದುಪಡಿಸಲು ಕ್ರಮವಹಿಸುವುದಾಗಿ ತಿಳಿಸಿದರು.

೮. ಪ್ರೊ. ಎಸ್.ರವಿರವರು ಮಾತನಾಡಿ, ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳ ಕೋರ್ಸ್ ಅವಧಿ ಮುಕ್ತಾಯಗೊಂಡ ನಂತರ ಆಡಳಿತಾಧಿಕಾರಿಗಳ ಕಛೇರಿಯಿಂದ, ಗ್ರಂಥಾಲಯದಿಂದ. ವಿದ್ಯಾರ್ಥಿನಿಲಯದಿಂದ ಹಾಗೂ ವಿಶ್ವವಿದ್ಯಾನಿಲಯದ ಇನ್ನಿತರ ಕಛೇರಿ/ವಿಭಾಗಗಳಿಂದ ಬೇಬಾಕಿಯನ್ನು ಪಡೆದು ಸಂಬಂಧಪಟ್ಟ ಅಧ್ಯಯನ ವಿಭಾಗಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಪ್ರಸ್ತುತ ವಿದ್ಯಾರ್ಥಿಗಳಿಂದ ಬೇಬಾಕಿಯನ್ನು ಪಡೆಯಲು ಕಷ್ಟ ಸಾಧ್ಯವಾಗುತ್ತಿದೆ. ಏಕೆಂದರೆ ಈ ಹಿಂದೆ ವಿದ್ಯಾರ್ಥಿಗಳು ತಮ್ಮ ಪದವಿಯ ಮೂಲ ಅಂಕಪಟ್ಟಿಗಳನ್ನು ಸ್ನಾತಕೋತ್ತರ ಕೋರ್ಸ್ ಪೂರ್ಣಗೊಳ್ಳುವವರೆಗೂ ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಸಂದರ್ಭದಲ್ಲಿಯೇ ಪಡೆದುಕೊಳ್ಳಲಾಗುತ್ತಿತ್ತು. ಪ್ರಸ್ತುತ ವಿದ್ಯಾರ್ಥಿಗಳು ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ಯಾವುದೇ ಪದವಿಯ ಮೂಲ ಅಂಕಪಟ್ಟಿಗಳನ್ನು ಸಲ್ಲಿಸಿರುವುದಿಲ್ಲ. ಏಕೆಂದರೆ ವಿದ್ಯಾರ್ಥಿಗಳ ಎಲ್ಲಾ ಅಂಕಪಟ್ಟಿಗಳು ಡಿಜಿಲಾಕರ್‌ನಲ್ಲಿ ಶೇಖರಿಸಿರುವುದರಿಂದ ವಿದ್ಯಾರ್ಥಿಗಳಿಂದ ಅಂಕಪಟ್ಟಿಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳೂ ಕೋರ್ಸ್ ಮುಗಿಸಿದ ನಂತರ ಬೇಬಾಕಿ ವಸೂಲು ಮಾಡುವುದು ಕಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದಾದರೂ ಒಂದು ಮಾರ್ಗೋಪಾಯವನ್ನು ಕಂಡುಕೊಳ್ಳಬೇಕಾಗಿರುತ್ತದೆಯೆಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, ಈ ಸಂಬಂಧ ಅಗತ್ಯ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

-ಸಹಿ-
**ಕುಲಸಚಿವರು (ಪ್ರ) ಮತ್ತು ಸದಸ್ಯ ಕಾರ್ಯದರ್ಶಿ**

-ಸಹಿ-
**ಕುಲಪತಿಗಳು ಮತ್ತು ಅಧ್ಯಕ್ಷರು**